**<u>ಸಾಕ್ಷಿಯನ್ನು ದಿನಾಂಕ 30.05.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎಸ್ ಅರ್ ವಿ ವಕೀಲರು 6 ನೇ ಪ್ರತಿವಾದಿಯ ಪರಃ</u>**

**1.** ನಮ್ಮ ತಾತ ಕ್ಯಾತಲಪ್ಪನವರಿಗೆ 3 ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಇದ್ದರು. ಅ ಇಬ್ಬರು ಗಂಡು ಮಕ್ಕಳ ಪೈಕಿ ನನ್ನ ತಂದೆ ನಾರೆಪ್ಪ ಮತ್ತು ನನ್ನ ದೊಡ್ಡಪ್ಪ ಮುನೆಪ್ಪ 1 ನೇ ಪ್ರತಿವಾದಿ ಅಗಿರುತ್ತಾರೆ. ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಸುಮಾರು 75 ವರ್ಷಗಳ ಹಿಂದೆಯೇ ವಿಬಾಗವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಒಟ್ಟಿಗೆ ವಾಸವಿದ್ದ ಬಗ್ಗೆ ದಾಖಲೆಗಳು ಇಲ್ಲ. 1 ನೇ ಪ್ರತಿವಾದಿ ನನ್ನ ತಂದೆ ಇಂದ ವಿಬಾಗವಾದ ನಂತರ ದಾವಾ ಐಟಂ ನಂ 1 ಅನ್ನು ಖರೀದಿಸಿದ್ದಾರೆಂದರೆ ಸಾಕ್ಷಿ ಒಟ್ಟಿಗೆ ಇದ್ದಾಗಲೇ ಅ ಅಸ್ತಿಯನ್ನು ಖರೀದಿಸಿದ್ದರು ಎಂದು ನುಡಿಯುತ್ತಾರೆ. ಅ ಅಸ್ತಿಯನ್ನು ಖರೀದಿಸಿದಾಗ ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಒಟ್ಟಿಗೆ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಒಟ್ಟಿಗೆ ವಾಸವಿದ್ದಾಗ ದಾವಾ ಐಟಂ ನಂ 1 ಅನ್ನು ಖರೀದಿಸಿದ್ದರು ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇವೆ. ಎನು ದಾಖಲೆ ಇದೆ ಎಂದರೆ ಸಾಕ್ಷಿ ಜನಗಳು ಹೇಳುತ್ತಾರೆ ಎಂದು ನುಡಿಯುತ್ತಾರೆ.

2. ನಮ್ಮ ಕುಟುಂಬ ಮತ್ತು 1 ನೇ ಪ್ರತಿವಾದಿಯ ಕುಟುಂಬದ ನಡುವೆ 75 ವರ್ಷಗಳಿಂದ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 30 ವರ್ಷಗಳ ಹಿಂದೆಯೇ ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯನ್ನು ನಾನು ಕೊನೆಯ ಬಾರಿಗೆ 2007 ರಲ್ಲಿ ನೋಡಿದ್ದೇನೆ. 2007 ರಲ್ಲಿಯೂ ಸಹ 1 ನೇ ಪ್ರತಿವಾದಿ ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಕೇಸಿನ 5 ಮತ್ತು 6 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ಸೊಸೆಯರು ಎಂದರೆ ಸರಿ. 5 ಮತ್ತು 6 ನೇ ಪ್ರತಿವಾದಿಯರ ಹೆಸರು ಕೃಷ್ಣಪ್ಪ ಎಂದರೆ ಸರಿ. ಕೃಷ್ಣಪ್ಪರವರು 2009 ರಲ್ಲಿ ತೀರಿಕೊಂಡಿದ್ದರು. 6 ನೇ ಪ್ರತಿವಾದಿಗೆ ಮಕ್ಕಳು ಇದ್ದಾರೆ. 1 ನೇ ಪ್ರತಿವಾದಿಯ ಅಸ್ತಿಗಳಲ್ಲಿ 6 ನೇ ಪ್ರತಿವಾದಿಯ ಮಕ್ಕಳಿಗೂ ಸಹ ಹಕ್ಕು ಇದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.